# ಕರ್ನಾಟಕ ವಿಧಾನ ಪರಿಷತ್

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 2889 |
| **ಸದಸ್ಯರ ಹೆಸರು** | ಶ್ರೀ ಆಯನೂರು ಮಂಜುನಾಥ್<br>(ಪದವೀಧರರ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | 30.03.2022 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ. | ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬುಗೆರೆಯ ಹೋಬಳಿಯಲ್ಲಿರುವ ದೇವಸ್ಥಾನಗಳಿಗೆ ರಸ್ತೆ ಮಾರ್ಗವನ್ನು ಕಲ್ಪಿಸಲಾಗಿದೆಯೇ; | ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬುಗೆರೆಯ ಹೋಬಳಿಯಲ್ಲಿರುವ ದೇವಸ್ಥಾನಗಳಿಗೆ ನಕಾಶೆ ಯಲ್ಲಿರುವಂತೆ ರಸ್ತೆಗಳು ಚಾಲ್ತಿಯಲ್ಲಿರುತ್ತವೆ. |
| ಆ. | ತೂಬುಗೆರೆ ಹೋಬಳಿ ಕಮಲೂರು ಪಾಳ್ಯದಲ್ಲಿರುವ ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಶಿರವಾರ ಗ್ರಾಮದಿಂದ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಕಮಲೂರು ಗ್ರಾಮ ನಕ್ಷೆಯಲ್ಲಿ ದಾಖಲಾಗಿದೆಯೇ; (ಇದ್ದಲ್ಲಿ, ರಸ್ತೆಯ ಉದ್ದ ಮತ್ತು ಅಗಲಗಳ ಅಳತೆ ವಿವರ ನೀಡುವುದು ಹಾಗೂ ನಕ್ಷೆಯ ಪ್ರತಿ ನೀಡುವುದು) | ಕಮಲೂರು ಗ್ರಾಮದ ಗ್ರಾಮ ನಕಾಶೆಯಂತೆ ಕಮಲೂರು ಪಾಳ್ಯಕ್ಕೆ ಸಮೀಪದಲ್ಲಿರುವ ಸರ್ವೇ ನಂ.32 ರಲ್ಲಿ ದೇವಸ್ಥಾನವಿದ್ದು, ಸದರಿ ದೇವಸ್ಥಾನಕ್ಕೆ ಹೋಗುವ ಕಾಲುದಾರಿಯ ಅಗಲ 8 ಅಡಿ (2.4 ಮೀ.) ಹಾಗೂ ಇದರ ಉದ್ದ ಶಿರವಾರ ಗಡಿಯಿಂದ ಅಂದಾಜು 1.00 ಕಿ.ಮೀ. ಆಗಿರುತ್ತದೆ. |
| ಇ. | ಭಕ್ತಾದಿಗಳು ಹಾಗೂ ಸಾರ್ವಜನಿಕರು ಓಡಾಡಲು ಇರುವ ಸದರಿ ರಸ್ತೆಯನ್ನು ಅಕ್ರಮವಾಗಿ ಅತಿಕ್ರಮಮಣ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅತಿಕ್ರಮಣಕಾರರು ಯಾರು; ಅವರು ವಿರುದ್ಧ ದೂರು ದಾಖಲಾಗಿದೆಯೇ; (ವಿವರ ನೀಡುವುದು) | ಸರ್ವೇ ನಂ.66/2ರ ಖಾತೆದಾರರಾದ ಕೆ.ಎಸ್. ಸಂಪಂಗಿರಾಮಯ್ಯ ರವರು ರಸ್ತೆ ನಿರ್ಮಾಣಕ್ಕೆ ಅಡಚಣೆ ಉಂಟುಮಾಡಿರುತ್ತಾರೆ. ಸದರಿಯವರು ರಸ್ತೆ ನಿರ್ಮಾಣದ ವಿಚಾರದಲ್ಲಿ ದೊಡ್ಡಬಳ್ಳಾಪುರ ಜೆ.ಎಂ.ಎಫ್.ಸಿ. ಸಿವಿಲ್ ನ್ಯಾಯಾಲಯದಲ್ಲಿ ಓ.ಎಫ್.ನಂ.42/2019 ರಂತೆ ದಾವೆ ಹೂಡಿರುತ್ತಾರೆ. |
| ಈ. | ಸದರಿ ರಸ್ತೆಯನ್ನು ಅತಿಕ್ರಮಿಸಿ ಕೊಂಡಿರುವ ಬಗ್ಗೆ ಸ್ಥಳ ಪರಿಶೀಲನೆ ನಡೆಸಲಾಗಿದೆಯೇ; ಇಲ್ಲದಿದ್ದಲ್ಲಿ ಗ್ರಾಮ ಸ್ಥಳ ಮಹಜರ್‌ನೊಂದಿಗೆ ಸ್ಥಳ ಪರಿಶೀಲನೆ ನಡೆಸಿ ವರದಿ ನೀಡುವುದ ರೊಂದಿಗೆ ಸಾರ್ವಜನಿಕರು ಓಡಾಡಲು ಅತಿಕ್ರಮಿಸಿಕೊಂಡಿರುವ ರಸ್ತೆಯನ್ನು ತೆರವುಗೊಳಿಸಲಾಗುವುದೇ? | ಸದರಿ ರಸ್ತೆಯನ್ನು ಅತಿಕ್ರಮಿಸಿಕೊಂಡಿರುವ ಬಗ್ಗೆ ಸ್ಥಳ ಪರಿಶೀಲನೆ ನಡೆಸಲಾಗಿದ್ದು, ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿರುವ ಪ್ರಕರಣದ ಹಾಲಿ ವಸ್ತುಸ್ಥಿತಿ ಬಗ್ಗೆ ಪರಿಶೀಲಿಸಿಕೊಂಡು ತುರ್ತಾಗಿ ಒತ್ತುವರಿಯನ್ನು ತೆರವುಗೊಳಿಸಲು ಕ್ರಮವಹಿಸಬೇಕಿದೆ. |

ಸಂಖ್ಯೆ: ಗ್ರಾಅಪ:15ನೇವಿಸ:200/92:ಆರ್.ಆರ್.ಸಿ:2021

**(ಕೆ.ಎಸ್.ಈಶ್ವರಪ್ಪ)**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು